**ದಿನಾಂಕ 05.01.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಡಿ.ಎಸ್.ಕೆ. ವಕೀಲರಿಂದಃ**

1. ಕೆ. ಬಾದೆಗೌಡ ನನಗೆ ಚಿಕ್ಕಪ್ಪನಾಗಬೇಕು. ಚಿಕ್ಕಬಾದೇಗೌಡ ಮತ್ತು ಮಲ್ಲಪ್ಪ ಅಂದರೆ ನನ್ನ ತಂದೆ ಭಾಗ ಮಾಡಿಕೊಂಡಿದ್ದು, ವಿಭಾಗದಲ್ಲಿ ದಾವಾ ಸ್ವತ್ತು ನನ್ನ ತಂದೆಗೆ ಬಂದಿರುತ್ತದೆ, ನಮ್ಮ ತಂದೆಯ ಮುಖಾಂತರ ನನಗೆ ಬಂದಿದೆ. ಬಾದೇಗೌಡರು ಮತ್ತು ನನ್ನ ತಂದೆ ಭಾಗ ಮಾಡಿಕೊಂಡ ಸಂದರ್ಭದಲ್ಲಿ ನನ್ನ ತಂದೆಗೆ 4 ಎಕರೆ ಜಮೀನು ಬಂದಿದೆ. ಸದರಿ ಜಮೀನಿನ ಸರ್ವೆ ನಂ. 229/2 ಎಂದರೆ ಸರಿ. ಕ್ರಯ ಪತ್ರದಲ್ಲಿ ಸರ್ವೆ ನಂ 229 ರ ಪೂರ್ವಾರ್ಧ ಭಾಗವನ್ನು ನಮ್ಮ ಚಿಕ್ಕಪ್ಪನವರು ಒಟ್ಟು 6 ಎಕರೆಯಂತೆ ತೆಗೆದುಕೊಂಡಿದ್ದಾರೆ ಎಂದರೆ ಸರಿ. 06 ಎಕರೆಯ ಪಶ್ಚಿಮಾರ್ಧ ಭಾಗವನ್ನು ದೊಡ್ಡ ಹಾಲಪ್ಪ ಮತ್ತು ಮರುಳಪ್ಪನವರು ಉಳಿಸಿಕೊಂಡಿದ್ದರು ಎಂದರೆ ಸರಿ. ಕ್ರಯದ ನಂತರ ಸದರಿ ಸರ್ವೆ ನಂ 229/2 ಎಂದು ಆಗಿದೆ ಎಂದರೆ ಸರಿ. ನಮ್ಮ ಚಿಕ್ಕಪ್ಪನವರು 1956 ರಲ್ಲಿ ಆ ರೀತಿ ಕ್ರಯವನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿ.
2. ತದನಂತರ ರಸ್ತೆಯು ಸರ್ವೆ ನಂ. 229/1 ರ ಮಧ್ಯದಲ್ಲಿ ಹೋಗಿದೆ ಎಂದರೆ ಸರಿ. ಸರ್ವೆ ನಂ. 229/1 ರ ಮಧ್ಯೆ ರಸ್ತೆಯು ಹೋದಾಗ ಪೂರ್ವ ದಿಕ್ಕಿನಲ್ಲಿ ಚಿಕ್ಕಬಾದಪ್ಪನವರಿಗೆ 1 ಎಕರೆ 36 ಗುಂಟೆ ಜಮೀನು ಇನ್ನೂ ಉಳಿದುಕೊಂಡಿದೆ ಎಂದರೆ ಸರಿಯಲ್ಲ. ಶಿವಣ್ಣ, ರುಘುನಾಥ ಮತ್ತು ಚಿಕ್ಕಮರುಳಪ್ಪ ಎಲ್ಲರೂ ನನ್ನ ತಮ್ಮಂದಿರು ಎಂದರೆ ಸರಿ. ಸದರಿಯವರು ಈ ದಾವೆಯ ಪ್ರತಿವಾದಿಗಳು ಎಂದರೆ ಸಾಕ್ಷಿಯು ಚಿಕ್ಕಮರುಳಪ್ಪನನ್ನು ಹೊರತುಪಡಿಸಿ ಶಿವಣ್ಣ ಮತ್ತು ರಘುನಾಥ ಪ್ರತಿವಾದಿಗಳು ಎಂದು ನುಡಿಯುತ್ತಾರೆ.
3. ನಮ್ಮ ಕುಟುಂಬದಲ್ಲಿ ವಿಭಾಗ 1993 ಮಾಡಿಕೊಳ್ಳಲಾಗಿದೆ. ಚಿಕ್ಕಬಾದಪ್ಪನವರ ಜಮೀನನ್ನು ಕಬಳಿಸುವ ಉದ್ದೇಶದಿಂದ ನಮ್ಮ ಜಮೀನನ್ನು ಪೂರ್ವ-ಪಶ್ಚಿಮ ಎಂದು ಭಾಗ ಮಾಡಿಕೊಂಡು ಪಶ್ಚಿಮಕ್ಕೆ ರಸ್ತೆ ಎಂದು ತೋರಿಸಲಾಗಿದೆ ಎಂದರೆ ಸರಿಯಲ್ಲ, ಸಾಕ್ಷಿಯು ಪಶ್ಚಿಮದಲ್ಲಿ ರಸ್ತೆ ಇದೆ ಎಂದು ನುಡಿಯುತ್ತಾರೆ. ಸರ್ವೆ ಸ್ಕೆಚ್ ನಲ್ಲಿಯೂ ಸಹ ರಸ್ತೆಯ

ಪೂರ್ವಕ್ಕೆ ಚಿಕ್ಕಬಾದಪ್ಪನವರ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಳತೆ ಮಾಡಿಸಿದ್ದಲ್ಲಿ ಆ ರೀತಿ ಬಂದಲ್ಲಿ ನಾವು ಬಿಟ್ಟುಕೊಡುತ್ತೇವೆ ಎಂದು ನುಡಿಯುತ್ತಾರೆ. ***(ಡಿ.ಎಸ್.ಕೆ. ವಕೀಲರು ಸ್ಥಳ ತನಿಖೆಗಾಗಿ ಆಯುಕ್ತರನ್ನು ನೇಮಕ ಮಾಡುವ ಕುರಿತು ಸಮಯಾವಕಾಶ ಕೋರಿರುತ್ತಾರೆ)***

ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**